ಶ್ರೀ ಬಿ.ಎಂ. ಇದಿನಬ್ಬ.—ಈ ರೀತಿ ಮಾಡಿಬಿಟ್ಟರೆ ಬಡ ಮಹಿಳೆಯರು ಬೀದಿ ಬಿಕಾರಿಗಳಾಗು ತ್ತಾರೆ ಗುತ್ತಿಗೆದಾರರನ್ನು ಇಡುವುದಿದ್ದರೆ ಅದು ನಿವಂಗೆ ಬಿಟ್ಟ ವಿಚಾರ. ಬೀಡಿ ಎಲೆ, ಹೊಗೆಸೊಪ್ಪು ಸರಾಗವಾಗಿ ಮೊದಲಿನ ಹಾಗೆ ಸಿಗಂಪಂಥ ವ್ಯವಸ್ಥೆ ಮಾಡದೇ ಇದ್ದರೆ ಅವರು ಅಲ್ಲೊಲ್ಲೋಲಕಲ್ಲೊಲ್ಲೋಲ ವಾಗಿ ಕ್ರಾಂತಿಯಾದೀತು ಎಂದು ಹೇಳುತ್ತೇನೆ.

ಶ್ರೀ ಎಸ್. ಕೆ. ಕಾಂತ.—ಸನ್ಮಾನ್ಯ ಅಧ್ಯಕ್ಷರೆ, ಕಾರ್ಮಿಕರಿಂದ ಮತ್ತು ಕಾರ್ಮಿಕ ಸಂಘಗಳವ ರಿಂದ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಮತ್ತು ಶೋಷಣೆ ಆಗುತ್ತಿದೆ ಎಂಬ ದೂರುಗಳು ಬಂದಿವೆ. ಇಂಥ ಸಂದರ್ಭದಲ್ಲಿ ಬಹಳ ಪ್ರಗತಿಪರ ವಿಚಾರದವರಾದ ಇದಿನಬ್ಬನವರು ಕಾಂಟ್ರಾಕ್ಟರವರಿಗೆ ಏತಕ್ಕೆ ಸಪೋರ್ಟ್ ಮಾಡುತ್ತಾರೆ ಎಂಬುದು ಗೊತ್ತಾಗುತ್ತಿಲ್ಲ ಎರಡನೆಯದು ಮಾಲೀಕ ಬೀಡಿ ಕಟ್ಟಿಸ ಬೇಕಾದರೆ ತನ್ನ ವ್ಯವಸ್ಥೆಯನ್ನು ತಾನೇ ಮಾಡಿಕೊಳ್ಳಬೇಕೆ ತಾನೆ ನೌಕರರನ್ನು ಇಟ್ಟುಕೊಂಡು ಎಲೆಗಳನ್ನು ತಂಬಾಕನ್ನು ತರಿಸಿ ಬೀಡಿ ಸುತ್ತುವ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಾನೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ.—ನಾನು ಹೇಳುವುದು ಮೂಲಭೂತವಾದ ವಿಷಯ ಶ್ರೀ ಯು.ಭೂಪತಿ ಆರ್. ವೆಂಕಟರಾಮಯ್ಯ ಹಾಗೂ ಇದಿನಬ್ಬನವರು ಒಟ್ಟಿಗೆ ಮಾತನಾಡತೊಡಗಿದರು.

(ಗೊಂದಲ)

ಅಧ್ಯಕ್ಷರು.—ನಾನು ಅವಕಾಶ ಕೊಡುವುದಿಲ್ಲ.

ಶ್ರೀ ಬಿ.ಎಂ, ಇದಿನಬ್ಬ.—ಗುತ್ತಿಗೆದಾರರನ್ನು ಬಿಡಬೇಕು ಎಂದು ಹೇಳುವುದಿಲ್ಲ. ಬಡ ಮಹಿಳೆ ಯರಿಗೆ ಅನ್ಯಾಯವಾಗುತ್ತಿದೆ.

ಅಧ್ಯಕ್ಷರು.—ನಾನು ಮೂರು ಸಾರಿ ನಿಮಗೆ ಅವಕಾಶ ಕೊಟ್ಟಿದ್ದೇನೆ. ಈಗ ಮತ್ತೆ ಕೊಡುವು ದಕ್ಕಾಗುವುದಿಲ್ಲ.

ಶ್ರೀ ಬಿ.ಎಂ. ಇದಿನಬ್ಬ.—ಇದು ಬಡ ಕಾರ್ಮಿಕರ ವಿಚಾರ.

ಶ್ರೀ ಆರ್. ವೆಂಕಟರಾಮಯ್ಯ.—ಒಂದೇ ಒಂದು...

ಅಧ್ಯಕ್ಷರು.—ಆಗುವುದಿಲ್ಲ.

ಶ್ರೀ ಯು. ಭೂಪತಿ.—ಇದು ಒಂದೇ ಜಿಲ್ಲೆಗೆ ಸೀಮಿತವಾದ ಪ್ರಶ್ನೆ ಅಲ್ಲ.

ಅಧ್ಯಕ್ಷರು.—ಈಗ ಕೊಶ್ಚನ್ ಅವರ್ ಮುಗಿದಿದೆ. ನಿಮ್ಮ ಪ್ರಶ್ನೆಯೂ ಮುಂದೆ ಇದೆ. ಅದನ್ನು ಲ್ಯಾಪ್ಸ್ ಮಾಡಿದರೆ ಏನು ಮಾಡುತ್ತೀರಿ ? ನಾನು ರೂಲ್ಸ್ ಬಿಟ್ಟು ಹೋಗುವುದಿಲ್ಲ. ಮಾನ್ ರಾಮಯ್ಯನವರೇ ನಿಮ್ಮ ಪ್ರಶ್ನೆಗೆ ಟೈಂ ಬೇಕು ಎಂದು ಕೇಳಿದ್ದಾರೆ. ಈಗ ರಾಜೂಗೌಡರೇ, ತಾವು ಕೇಳಿ.

ಕೊಳ್ಳೇಗಾಲ ತಾಲ್ಲೂಕಿನ ಭೂರಹಿತರಿಗೆ ವಸತಿಯನ್ನು ಕಲ್ಪಿಸುವುದು

೧೩೮೮. ಶ್ರೀ ಜಿ. ರಾಜುಗೌಡ (ಹನಗಲ್ಲು).—ಮಾನ್ಯ ಕಂದಾಯ(ಪುನರ್ವಸತಿ) ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಕೊಳ್ಳೇಗಾಲ ತಾಲ್ಲೂಕಿನಲ್ಲಿ ಭೂರಹಿತ ವಸತಿಯನ್ನು ಎಂದಿನಿಂದ ಪ್ರಾರಂಭ ಮಾಡಲಾಗಿದೆ,

೨) ಸರ್ಕಾರದಿಂದ ಈ ಯೋಜನೆಗೆ ಬಿಡುಗಡೆಯಾಗಿರುವ ಜಮೀನು ಒಟ್ಟು ವಿಸ್ತೀರ್ಣವೆಷ್ಟು ?

೩) ಎಷ್ಟು ಕುಟುಂಬಗಳಿಗೆ ಭೂಮಿಯನ್ನು ಹಂಚಿಸಲಾಗಿದೆ.

೪) ಈ ತಾಲ್ಲೂಕಿನಲ್ಲಿ ಪ್ರಾರಂಭದಿಂದಲೂ ಎಷ್ಟು ಜನ ಅನಧಿಕೃತವಾಗಿ ವ್ಯವಸಾಯ ಮಾಡಿ ಅಲ್ಲಿ ನೆಲಸಿರುತ್ತಾರೆ.

೫) ಈ ಕುಟುಂಬಗಳು ವಾಸಿಸುವ ಪ್ರದೇಶಗಳಲ್ಲಿ ಎಲ್ಲಾ ನಾಗರೀಕ ಸೌಲಭ್ಯಗಳು ಇವೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಪರಿಂತ್ರಿಗಳು).—

೧) ದಿನಾಂಕ ೧೧-೮-೭೫ ರಿಂದ ಪ್ರಾರಂಭವಾಗಿದೆ.

೨) ಒಟ್ಟು ೧೫೦೦ ಎಕರೆ

೩) ೧೯೨ ಕುಟುಂಬಗಳಿಗೆ.

೪) ಈ ಯೋಜನೆಯಲ್ಲಿ ೧೨ ಜನರು ಅನಧಿಕೃತವಾಗಿ ವ್ಯವಸಾಯ ಮಾಡಿ ಅಲ್ಲಿ ನೆಲಸಿರುತ್ತಾರೆ.

೫) ಸಾಕಷ್ಟು ಇರುವುದಿಲ್ಲ. ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲಾಗಿರುತ್ತದೆ.

ಶ್ರೀ ಜೆ. ರಾಜೂಗೌಡ —ಸ್ವಾಮಿ, ೧೫೦೦ ಎಕರೆ ಭೂಮಿ ಮಂಜೂರಾಗಿದ್ದರೂ ಸಹ ವಾಸ್ತವವಾಗಿ ಬಿಡುಗಡೆ ಆಗಿರತಕ್ಕದ್ದು ಕೇವಲ ೮೦೦ ಎಕರೆ ಮಾತ್ರ. ೧೯೨ ಕುಟುಂಬಗಳಲ್ಲದೆ ೧೨ ಕುಟುಂಬಗಳು ಅನಧಿಕೃತವಾಗಿ ಅಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಅಂದರೆ ಒಟ್ಟು ೨೧೦ ಕುಟುಂಬಗಳು ವ್ಯವಸಾಯ ಮಾಡುತ್ತಿವೆ. ಅವರಿಗೆ ತಲಾ ೪ ಎಕರೆ ಭೂಮಿಯನ್ನು ವಿತರಣೆ ಮಾಡಿದ್ದೀರಿ. ೮೦೦ ಎಕರೆ ಬಿಡುಗಡೆಯಾಗಿದೆ, ಇನ್ನುಳಿದ ೭೦೦ ಎಕರೆ ಬಿಡುಗಡೆ ಆಗಿಲ್ಲ. ಅಲ್ಲಿ ಬೆಟ್ಟಗುಡ್ಡಗಳಿವೆ, ಕೊಡುವುದು ಬೇಡ ಎಂದು ನಿಲ್ಲಿಸಿದ್ದಾರೆ ನನ್ನ ಪ್ರಶ್ನೆ ಏನೆಂದರೆ ನನ್ನ ತಾಲ್ಲೂಕಿನಲ್ಲಿ ವಿಶ್ವಸಂಸ್ಥೆ ನೆರವಿನಿಂದ ಮೈರಾದಾ ಪ್ರಾಜೆಕ್ಟ್ ಆಗಿದೆ. ಇದರಲ್ಲಿ ಅನೇಕ ಸಂಸಾರಗಳು ಭೂಮಿ ಮತ್ತು ಮನೆಗಳನ್ನು ಕಳೆದುಕೊಂಡಿದ್ದಾರೆ. ಅಂಥವರಿಗೆ ಉಳಿದಿರತಕ್ಕ ೭೦೦ ಎಕರೆ ಬಿಡುಗಡೆ ಮಾಡುತ್ತೀರಾ ? ಈಗ ಬಿಡುಗಡೆಯಾಗಿರುವ ಜಮೀನಿನ ಬಗ್ಗೆ ಹೊರಡಿಸಿರುವ ಸರ್ಕಾರಿ ಆಜ್ಞೆ ಸಂಖ್ಯೆ ಮತ್ತು ತಾರೀಖಿನ್ನು ದಯವಿಟ್ಟು ತಿಳಿಸಬೇಕಂ.

ಶ್ರೀ ಎಸ್.ಆರ್. ಬೊಮ್ಮಾಯಿ.—ಇದು ಲ್ಯಾಂಡ್‌ಲೆಸ್ ಸೆಟ್ಲ್‌ಮೆಂಟ್ ಏಜೆನ್ಸಿ ೧೯೭೫ರಲ್ಲಿ ಇದು ಪ್ರಾರಂಭವಾಯಿತಂ ಇದರಲ್ಲಿ ಎಕ್ಸ್ ಸರ್ವಿಸ್‌ಮೆನ್, ಎಸ್.ಸಿ./ಎಸ್.ಟಿ. ಬ್ಯಾಕ್‌ವರ್ಡ್‌ಕ್ಲಾಸ್ ಲ್ಯಾಂಡ್‌ಲೆಸ್ ಜನರಿಗೆ ಅನುಕೂಲ ಮಾಡಿಕೊಡತಕ್ಕ ಉದ್ದೇಶಕ್ಕಾಗಿ ಈ ಸಮಿತಿ ಇದೆ. ಇದಕ್ಕೆ ವಿಭಾಗಾಧಿಕಾರಿಗಳು ಅಧ್ಯಕ್ಷರಾಗಿದ್ದಾರೆ ತಹಸೀಲ್ದಾರ್‌ರವರು ಪದನಿಮಿತ್ತ ಪ್ರಾಜೆಕ್ಟ್ ಆಫೀಸರ್ ಆಗಿದ್ದಾರೆ ಎಸ್.ಸಿ. ೧೧೬ ಜನರಿಗೆ, ಎಕ್ಸ್ ಸರ್ವಿಸ್‌ಮನ್ ೧೬ ಜನರಿಗೆ ಬ್ಯಾಕ್‌ವರ್ಡ್‌ಕ್ಲಾಸ್ ೫೩ ಜನರಿಗೆ ತಲಾ ನಾಲ್ಕು ಎಕರೆಯಂತೆ ಜಮೀನನ್ನು ಮಂಜೂರು ಮಾಡಲಾಗಿದೆ. ಮಾನ್ಯ ಸದಸ್ಯರು ಇನ್ನೂ ೭೦೦ ಎಕರೆ ಜಮೀನು ಬಿಡುಗಡೆ ಮಾಡಬೇಕಾದೀದು ಇದೆ ಎಂಬುದಾಗಿ ಹೇಳಿದ್ದಾರೆ. ಅವರ ಸೂಚನೆಯನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಜಿ. ರಾಜುಗೌಡ.—ವ್ಯವಸಾಯ ಮಾಡತಕ್ಕ ಅಧಿಕೃತ ಕುಟುಂಬಗಳು ೧೯೨ ಅನಧಿಕೃತ ಕುಟುಂಬಗಳು ೧೪ ಒಟ್ಟು ೨೧೦ ಕುಟುಂಬಗಳು ಪ್ರತಿ ಕುಟುಂಬಗಳಿಗೆ ತಲಾ ನಾಲ್ಕು ಎಕರೆಯಂತೆ ಜಮೀನನ್ನು ಬಿಡುಗಡೆ ಮಾಡುವುದಕ್ಕೆ ತಾವೇ ಆರ್ಡರ್ ಮಾಡಿದ್ದೀರಿ. ಆದರಂತೆ ೮೦೦ ಎಕರೆ ಬಿಡುಗಡೆಯಾಗಿದೆ ತಮ್ಮ ಆದೇಶದ ಪ್ರಕಾರ ೧೫೦೦ ಎಕರೆ ಜಮೀನು ಬಿಡುಗಡೆಯಾಗಬೇಕಾಗಿತ್ತು. ಆದ್ದರಿಂದ ಇನ್ನುಳಿದ ೭೦೦ ಎಕರೆ ಜಮೀನನ್ನು ಬಿಡುಗಡೆ ಮಾಡುವುದಕ್ಕೆ ಆರ್ಡರ್ ಪಾಸುಮಾಡ್ತೀರಾ ? ಅನಧಿಕೃತವಾಗಿ ಸಾಗುವಳಿ ಮಾಡುತ್ತಿರತಕ್ಕಂತಹವರಿಗೆ ಪಟ್ಟವನ್ನು ಇಷ್ಯೂ ಮಾಡುವುದಕ್ಕೆ ವ್ಯವಸ್ಥೆ ಮಾಡ್ತೀರಾ? ಮೈರಾದ ಯೋಜನೆಯಲ್ಲಿ ೭ ಲಕ್ಷ ರೂಪಾಯಿಗಳು ಉಳಿದಿದೆ. ಆ ಹಣದಲ್ಲಿ ಆ ಪ್ರದೇಶದಲ್ಲಿರತಕ್ಕ ನಾಗರೀಕರಿಗೆ ಲೈಟ್ ಕೊಡತಕ್ಕಂಥದ್ದು ಹಾಗೂ ಸ್ಕೂಲನ್ನು ಮಾಡತಕ್ಕಂತಹ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಆ ಸಮಿತಿಯ ಸಭೆಯನ್ನು ಜುಲೈ ತಿಂಗಳಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಹೇಳಿದಂತಹ ಎಲ್ಲಾ ಸೂಚನೆಗಳನ್ನು ಪರಿಶೀಲನೆ ಮಾಡುವುದಕ್ಕೆ ಆದೇಶ ನೀಡುತ್ತೇನೆ.

ಅಧ್ಯಕ್ಷರು.—ಮಾನ್ಯ ಎಂ.ಎಸ್. ಪಾಟೀಲ್‌ರವರೇ ನಿಮ್ಮ ಪ್ರಶ್ನೆ ಗ್ರಾಮೀಣ ಅಭಿವೃದ್ಧಿ ಇಲಾಖೆಗೆ ಪರಿವರ್ತನೆಗೊಂಡಿದೆ. ಆದ್ದರಿಂದ ಅದನ್ನು ಆ ಇಲಾಖೆಯ ಪ್ರಶ್ನೆ ಈ ಸಭೆಯಲ್ಲಿ ಬರುವ ದಿವಸ ತೆಗೆದುಕೊಳ್ಳಲಾಗುವುದು ಮತ್ತೆ ಶ್ರೀ ಆರ್. ರಾಮಯ್ಯನವರೇ ನಿಮ್ಮ ಪ್ರಶ್ನೆಗೆ ಸರ್ಕಾರದವರು ಸವರಿಯನ್ನು ಕೇಳಿದ್ದಾರೆ ಅದನ್ನು ಇನ್ನೊಂದು ದಿವಸ ತೆಗೆದುಕೊಳ್ಳಲಾಗುವುದು.